

ಚೂ ಕಣಿವೆಯ ದೃಶ್ಯ



ಎತ್ತರದ ಬುದ್ಧ ಪ್ರತಿಮೆ

ಬೆಟ್ಟವೊಂದರ ಶಿಖರದ ಮೇಲೆ ಹದಿನೇಳನೇ ಶತಮಾನದಲ್ಲಿ ನಿರ್ಮಿಸಿದ ತವಾಂಗ್ ಬೌದ್ಧ ದೇವಾಲಯವಿದೆ. ಭಾರತದ ಅತಿ ದೊಡ್ಡ ಹಾಗೂ ಜಗತ್ತಿನ ಎರಡನೇ ದೊಡ್ಡ ಮೊನಾಸ್ಟರಿ ಇದು. ಪುನರ್ನಿರ್ಮಾಣಗಳ ಬಳಿಕ ವಿಶಾಲವಾಗಿದ್ದರೂ, ಮೂಲ ನಿರ್ಮಿತಿಯನ್ನು ಹಾಗೆಯೇ ಸಂರಕ್ಷಿಸಿದ್ದಾರೆ.

ಈ ಮೊನಾಸ್ಟರಿಯಲ್ಲಿ ಚಾರಿತ್ರಿಕ ಮಹತ್ವದ ವಸ್ತುಗಳಿರುವ ವಸ್ತು ಸಂಗ್ರಹಾಲಯವಿದೆ. 17ನೇ ಶತಮಾನದ ಟಿಬೆಟನ್ ಪ್ರಾರ್ಥನಾ ಪದ್ಯಗಳಿರುವ ಹಸ್ತಪ್ರತಿ, ಕಾಂಗ್ಲಿಂಗ್(ಕಹಳೆ) ಮುಂತಾದ ವಾದ್ಯಗಳು, ಖಡ್ಗ, ಕರಕುಶಲ ವಸ್ತುಗಳು ಗಮನ ಸೆಳೆಯುತ್ತವೆ.

ತವಾಂಗ್ ನಗರದ ಮಧ್ಯ ಭಾಗದಲ್ಲಿ ಬುದ್ಧಾ ಪಾರ್ಕ್‌ನಲ್ಲಿ ಎತ್ತರದಲ್ಲಿ ಹಿತ್ತಾಳೆಯ ಬುದ್ಧ ಪ್ರತಿಮೆ ಇದೆ. ನಗರದ ಎಲ್ಲ ತುದಿಯಿಂದಲೂ ಇದು ಕಾಣಿಸುತ್ತದೆ. ತವಾಂಗ್‌ನ ಯುದ್ಧ ಸ್ಮಾರಕ ತುಂಬಾ ವಿಶೇಷವಾದದ್ದು. ಇದನ್ನು ಬೌದ್ಧ ವಿಹಾರದ ಮಾದರಿಯಲ್ಲಿ ನಿರ್ಮಿಸಲಾಗಿದೆ. 1962ರ ಚೀನಾ ಯುದ್ಧದ ಪ್ರತ್ಯಕ್ಷ ಬಲಿಪಶು ತವಾಂಗ್. ಆ ಯುದ್ಧದಲ್ಲಿ ಮಡಿದ 2000ಕ್ಕೂ ಅಧಿಕ ಸೈನಿಕರ ಸ್ಮರಣಾ ಮಂದಿರವಿದು. ಅಸ್ಸಾಂ, ಪಂಜಾಬ್, ಮರಾಠಾ, ಮದ್ರಾಸ್ ಮುಂತಾದ ರೆಜಿಮೆಂಟ್‌ಗಳಲ್ಲಿ ಹೋರಾಡಿ ಮಡಿದ ಪ್ರತಿಯೊಬ್ಬ ಸೈನಿಕನ ಹೆಸರಿನೊಂದಿಗೆ ವಿವರಣೆಯ ಫಲಕವಿದೆ.

ಸ್ವಲ್ಪ ದೂರದಲ್ಲಿ ಬಯಲು ರಂಗಮಂಟಪದಂತಹ ನಿರ್ಮಾಣವಿದೆ. ಅಲ್ಲಿ 1962ರ ಚೈನಾ ಯುದ್ಧದ ಸಾಕ್ಷ್ಯಚಿತ್ರ ಪ್ರದರ್ಶನವಿತ್ತು. ಮೈ ನಡುಗಿಸುವ ಚಳಿಗೆ ಯೋಧರು, ನಮ್ಮ ಮಧ್ಯೆ ಗ್ಯಾಸ್ ಹೀಟರ್ ತಂದಿಡುತ್ತಿದ್ದರು.

ಈ ಜಿಲ್ಲೆಯಲ್ಲಿರುವ ಇನ್ನೊಂದು ಯುದ್ಧ ಸ್ಮಾರಕ ಜಸ್ವಂತ್ ಘರ್. ಇದು